ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಈಗಾಗಲೇ ೧೫೦ ಜನ ವೈದ್ಯರುಗಳ ಸಂದರ್ಶನ ಪಿ. ಎಸ್. ಸಿ ಮಂಜೂರಾತಿಯಲ್ಲಿ ಆಗಬೇಕಾಗಿದೆ. ಅದು ೧೫ನೇ ತಾರೀಖು ಮುಗಿದು, ಈ ತಿಂಗಳ ಕೊನೆಯೊಳಗೆ ಈ ಖಾಲಿ ಜಾಗಗಳನ್ನು ಭರ್ತಿ ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಹೊಸ ಆಸ್ಪತ್ರೆಗಳನ್ನು, ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡುವ ಮುಂಚೆ, ಖಾಲಿ ಇರತಕ್ಕ ಕೇಂದ್ರಗಳಿಗೆ ವೈದ್ಯರುಗಳನ್ನು ನೇಮಕ ಮಾಡಬೇಕು.

ಅಧ್ಯಕ್ಷರು.—ಈ ತಿಂಗಳ ಕೊನೆಯೊಳಗೆ ಎಂದು ಹೇಳಿದ್ದಾರೆ ಬಿಡಿ. ನಿಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತಾರೆ.

ಚುಕ್ಕಿ ಪ್ರಶ್ನೆ ೫೭೦ (೬೧೩)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)
ಚುಕ್ಕಿ ಪ್ರಶ್ನೆ ೫೭೧ (೧೬೩೭)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)
ಚುಕ್ಕಿ ಪ್ರಶ್ನೆ ೫೭೨ (೪೫೬)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)
ಚುಕ್ಕಿ ಪ್ರಶ್ನೆ ೫೭೩ (೧೪೦೧)
(ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು.—ಇನ್ನೊಮ್ಮೆ ಪ್ರಶ್ನೋತ್ತರ ಪಟ್ಟಿಯಲ್ಲಿ ಗೈರು ಹಾಜರಾದವರನ್ನು ಕರೆಯುತ್ತೇನೆ. ಶ್ರೀಯುತರಾದ :

| | | |
|---|---|---|
| ೧) | ಹೆಚ್. ಸಿ. ಮಹದೇವಪ್ಪ (ಟಿ. ನರಸೀಪುರ) | ಗೈರು ಹಾಜರಿ |
| ೨) | ಬಿ. ನಾರಾಯಣಸ್ವಾಮಿ (ಬಾಗೇಪಲ್ಲಿ) | –,,– |
| ೩) | ಸಿ. ಎನ್. ಭಾಸ್ಕರಪ್ಪ (ಬೆಳ್ಳಾವಿ) | –,,– |
| ೪) | ಎ. ತಿಪ್ಪೇಸ್ವಾಮಿ (ಚಳ್ಳಕೆರೆ) | –,,– |
| ೫) | ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) | –,,– |
| ೬) | ಲೀಲಾದೇವಿ ಆರ್. ಪ್ರಸಾದ್ (ಅಥಣಿ) | –,,– |
| ೭) | ಮುಕ್ತಾರ್‌ನ್ನೀಸ (ನರಸಿಂಹರಾಜ) | –,,– |
| ೮) | ಎಂ. ಎಲ್. ಮುತ್ತಣ್ಣನವರ್ (ಗೋಕಾಕ್) | –,,– |
| ೯) | ಜಿ. ಎಸ್. ಆಚಾರ್ (ಬೈಂದೂರು) | –,,– |
| ೧೦) | ಬಿ. ಜಿ. ಕೊಟ್ರಪ್ಪ (ಹರಿಹರ) | –,,– |

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ.

ಟಿ. ನರಸೀಪುರದ ತಿರುಮಕೂಡ್ಲು ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

೧೩೨೨. ಶ್ರೀ ಹೆಚ್. ಸಿ. ಮಹದೇವಪ್ಪ (ಟಿ.ನರಸೀಪುರ).—ಮಾನ್ಯ ಪಾರ್ಟಿ ಯುವ ಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರ ತಿರುಮಕೂಡಲ್ಲು ಪ್ರದೇಶವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡುವ ಬಗ್ಗೆ ಸರ್ಕಾರದವರು ಆಲೋಚಿಸುತ್ತಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು ?

ಇ) ಇದಕ್ಕೆ ಸಂಬಂಧಿಸಿದಂತೆ ಎಷ್ಟು ಹಣ ಖರ್ಚು ಮಾಡಲಾಗುವುದು ?

**ಶ್ರೀ ಜೀವರಾಜ ಆಳ್ವ** (ವಾರ್ತಾ, ಯುವಜನ ಸೇವಾ ಕ್ರೀಡಾ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

## ವೈದ್ಯಕೀಯ ಸೌಲಭ್ಯಗಳು ದೊರೆಯದಿರುವುದು.

೧೭೬೨. **ಶ್ರೀ ಬಿ. ನಾರಾಯಣ ಸ್ವಾಮಿ** (ಬಾಗೇಪಲ್ಲಿ).—ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಾಗೇಪಲ್ಲಿ ತಾಲ್ಲೂಕು ಸಜ್ಜಾವಾರ ಗ್ರಾಮದ ಬಾವಿಯಲ್ಲಿ ಸೊಪ್ಪು ಸಿಡಿದ ಸ್ಥಳದಲ್ಲಿಯೇ ಇಬ್ಬರು ಮೃತರಾಗಿ ಉಳಿದ ೧೦ ಜನರಿಗೆ ತೀವ್ರಗಾಯಗಳಿಗೊಳಗಾದವರನ್ನು ತಾಲ್ಲೂಕಿನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ತೆಗೆದುಕೊಂಡು ಬಂದಾಗ ಯಾವ ವೈದ್ಯರೂ ಇರದೆ ಗಾಯಾಳುಗಳು ತೊಂದರೆ ಅನುಭವಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸ್ಥಳೀಯ ಶಾಸಕರಿಂದ ಸರ್ಕಾರದವರಿಗೆ, ವಿಷಯ ತಿಳಿಸಿದ್ದರೂ, ಅಂತಹವರ ಮೇಲೆ ಕ್ರಮಕೈಗೊಳ್ಳದೇ ಇರಲು ಕಾರಣಗಳೇನು ?

**ಶ್ರೀ ಹೆಚ್. ಎಲ್. ತಿಮ್ಮೇಗೌಡ** (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಬಂದಿದೆ.

ಆ) ಈ ವಿಚಾರದಲ್ಲಿ ಇಲಾಖಾ ತನಿಖೆಗೆ ವ್ಯವಸ್ಥೆ ಮಾಡಲಾಗಿದೆ ಮತ್ತು ಈ ಬಗ್ಗೆ ವಿಚಾರಣಾ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು,

## ಜಿಲ್ಲಾ ಮುಖ್ಯ ಕೇಂದ್ರದಲ್ಲಿ ರಂಗ ಮಂದಿರ ನಿರ್ಮಿಸುವುದು.

೧೭೬೩. **ಶ್ರೀ ಸಿ. ಎನ್. ಭಾಸ್ಕರಪ್ಪ** (ಬೆಳ್ಳಾವಿ).—ಮಾನ್ಯ ವಾರ್ತಾ, ಯುವ ಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸರ್ಕಾರದ ವತಿಯಿಂದ ರಂಗಮಂದಿರ ನಿರ್ಮಿಸುವ ಯೋಜನೆಯಂತೆ ತುಮಕೂರಿನಲ್ಲಿ ನಿರ್ಮಿಸಲು ಯೋಜಿಸಲಾಗಿರುವ ರಂಗಮಂದಿರದ ಕಾಮಗಾರಿಯು ಎಷ್ಟರಮಟ್ಟಿಗೆ ಪ್ರಗತಿಯಲ್ಲಿದೆ ಎಂಬುದನ್ನು ತಿಳಿಸುವುದು ;

ಆ) ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಿಕೊಡುವುದು ಕಷ್ಟವಾಗಿ ಆಗಾಗ್ಗೆ ವಿಳಂಬವಾಗುವುದರಿಂದ ಅಧಿಕ ವೆಚ್ಚವಾಗುವುದರಿಂದ ಸರ್ಕಾರದವರೇ ಪೂರ್ಣ ಹಣ ನೀಡಿ ಶೀಘ್ರವೇ ನಿರ್ಮಿಸುವ ಯೋಜನೆ ಇದೆಯೇ ?

**ಶ್ರೀ ಜೀವರಾಜ ಆಳ್ವ** (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಸಚಿವರು).—

ಅ) ೧೮ ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಗಲಿದೆ ಟೆಂಡರ್‌ಗಳನ್ನು ಸ್ವೀಕರಿಸಲಾಗಿದೆ. ನಿರ್ಮಾಣ ಕಾರ್ಯ ಪೂರೈಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಆ) ಇಲ್ಲ.